ಜನ ಭಗ್ನ ಹೃದಯಗಳಿಗೆ ಈ ಮೂರು ಚಕ್ರದ ಗಾಡಿ ತನ್ನ ಬೆನ್ನು ಎಂಬ ವೇದಿಕೆ ಒದಗಿಸಿ ಪುಣ್ಯ ಕಟ್ಟಿಕೊಂಡಿದೆಯೋ ಗೊತ್ತಿಲ್ಲ.

ಬರೀ ಪ್ರೀತಿ ಪ್ರೇಮಗಳಷ್ಟೇ ಅಲ್ಲ, ಅಪರೂಪಕ್ಕೆ ಮಾತಾ ಪಿತೃಗಳೆಡೆಗಿನ ಭಕ್ತಿಯೂ ವ್ಯಕ್ತವಾಗುವುದಿದೆ. 'ತಂದೆ ತಾಯಿಗಳ ಆಶೀರ್ವಾದ' ಅನ್ನುವ ಪದ ಹುಟ್ಟಿಕೊಂಡಿದ್ದು ಇದೇ ಕಾರಣಕ್ಕೆ. ಇನ್ನು ನಮ್ಮ ಚಿತ್ರರಂಗದ ನಟಶಿರೋಮಣಿಗಳಿಗೆ ಹೃದಯವಷ್ಟೇ ಅಲ್ಲ, ತಮ್ಮ ವಾಹನದ ಬೆನ್ನ ಮೇಲೂ ಪರ್ಮನೆಂಟಾಗಿ ಜಾಗ ಕೊಟ್ಟುಬಿಟ್ಟಿದ್ದಾರೆ ನಮ್ಮ ಆಟೊ ಚಾಲಕರು. ಅದಕ್ಕೆ ತಕ್ಕಂತೆ ಎಲ್ಲ ಭಾಷೆಯ ಹೀರೋಗಳಿಗೂ ಆಟೊ ಡ್ರೈವರನ ಪಾತ್ರದಲ್ಲಿ ನಟಿಸಬೇಕೆಂದರೆ ಅದೇನೋ ಹುಕಿ! ಪೈಪೋಟಿಗೆ ಬಿದ್ದವರಂತೆ ದೊಡ್ಡ ದೊಡ್ಡ ನಾಯಕರೆಲ್ಲಾ ಆಟೊ ಓಡಿಸುವವನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಿದೆ. ಆ ಮೂಲಕ ಸಾಮಾನ್ಯ ಆಟೊ ಚಾಲಕರ ಎದೆ ಅಭಿಮಾನದಿಂದ ಉಬ್ಬುವಂತೆ ಮಾಡಿದ್ದಿದೆ.

ಕಾರಣವಿಷ್ಟೆ, ಆಟೊ ಡ್ರೈವರುಗಳದ್ದೂ ಪೊಲೀಸರಂತೆಯೇ ರೋಚಕ ವೃತ್ತಿ. ಅದರಂತೆ ಈ ಕೆಲಸವೂ ಹೆಚ್ಚಿನ ಶ್ರಮವನ್ನು ಬೇಡುತ್ತದೆ. ರಾತ್ರಿ ಗಸ್ತುಗಳಲ್ಲಿದ್ದಾಗ ರೈಲು. ಬಸ್ ನಿಲ್ದಾಣಗಳ ಬಳಿ ಮೈಕೊರೆಯುವ ಚಳಿಯಲ್ಲಿ ತಲೆಗೊಂದು ಮಫ್ಲರ್ ಸುತ್ತಿಕೊಂಡು ಗಿರಾಕಿಗಳಿಗೆ ಕಾಯುತ್ತ ಆಟೊದಲ್ಲೇ ನಿದ್ದೆ ಹೋಗುವ ಎಷ್ಟೋ ಚಾಲಕರು ಕಾಣಸಿಗುತ್ತಾರೆ. ತಂಗಿಯ ಮದುವೆ ಮಾಡಲು, ತಂದೆಯ ಆಸ್ಪತ್ರೆ ವೆಚ್ಚ ತೂಗಿಸಲು ಹಗಲು ರಾತ್ರಿ ಎರಡೂ ಪಾಳಿಯಲ್ಲಿ ಆಟೊ ಓಡಿಸುವರಿದ್ದಾರೆ. ಪ್ರತಿಯೊಬ್ಬರದೂ ಒಂದೊಂದು ಸಿನಿಮಾಗಾಗುವ ಕತೆಯೇ. ಉಳಿದಂತೆ ದುಷ್ಟರು... ದುರುಳರು? ಬಿಡಿ, ಎಲ್ಲಾ ವೃತ್ತಿಗಳಲ್ಲೂ ಇರುವಂತೆ ಇಲ್ಲಿಯೂ ಇರುತ್ತಾರೆ. ಆದರೆ ಅಂಥ ಕೆಲವರಿಂದಾಗಿ ಸಮಾಜಮುಖಿ ಆಟೊ ಡ್ರೈವರುಗಳನ್ನೆಲ್ಲಾ ಹಳದಿ ಕಣ್ಣಿನಿಂದ ನೋಡುವವರ ಬಗ್ಗೆ ಖಂಡಿತಾ ನನ್ನ ಆಕ್ಷೇಪವಿದೆ.


## ತುರುವೇಕೆರೆ ರವಿಶಂಕರ್

ತಮ್ಮ ಪೊಲೀಸ್ ವೃತ್ತಿಯ ಅನುಭವಗಳ ನೆಲೆಯಲ್ಲಿ ಪ್ರಬಂಧಗಳನ್ನು ಬರೆಯುವ ರವಿಶಂಕರ್ ತುಮಕೂರು ಜಿಲ್ಲೆಯ ತುರುವೇಕೆರೆಯವರು. ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ಬೆಂಗಳೂರಿನ ಲೋಕಾಯುಕ್ತದಲ್ಲಿ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ. 'ಮಯೂರ', 'ಪ್ರಜಾವಾಣಿ', 'ಸುಧಾ'ಗಳಲ್ಲಿ ಅವರ ಅನೇಕ ಪ್ರಬಂಧಗಳು ಪ್ರಕಟವಾಗಿವೆ. ಪ್ರಬಂಧ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಈ ಲೇಖಕ. ಪೊಲೀಸ್ ಅಧಿಕಾರಿಯಾಗಿ ಗುಲ್ಬರ್ಗಾ, ಮಂಗಳೂರುಗಳಲ್ಲಿ ಹಾಗೂ ಎಸ್‌ಟಿಎಫ್‌ನ ವೀರಪ್ಪನ್ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ (2005) ಕಾರ್ಯನಿರ್ವಹಿಸಿರುವ ಅವರು ಈ ಕೆಲಸಕ್ಕಾಗಿ ಸರ್ಕಾರದ ಪುರಸ್ಕಾರಕ್ಕೂ ಪಾತ್ರರಾಗಿದ್ದಾರೆ.